# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 385 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10–12–2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು, ನಮ್ಮ ಗ್ರಾಮ, ನಮ್ಮ ರಸ್ತೆ, ಪಿ.ಎಂ.ಜಿ.ಎಸ್.ವೈ. ಇತ್ಯಾದಿ ಲೋಕೋಪಯೋಗಿ ಇಲಾಖೆ ನಿರ್ವಹಿಸುತ್ತಿರುವ ರಸ್ತೆಗಳ ಸಂಖ್ಯೆ ಮತ್ತು ಉದ್ದವೆಷ್ಟು; ಅವುಗಳನ್ನು ವಾರ್ಷಿಕವಾಗಿ ನಿರ್ವಹಣೆ ಮಾಡಲು ಯಾವ ರೀತಿಯ ಕ್ರಮ ವಹಿಸಲಾಗುತ್ತಿದೆ; ವಾರ್ಷಿಕವಾಗಿ ವೆಚ್ಚ ಮಾಡುತ್ತಿರುವ ಮೊತ್ತವೆಷ್ಟು; | ರಾಜ್ಯದಲ್ಲಿ 49 ರಾಷ್ಟ್ರೀಯ ಹೆದ್ದಾರಿಗಳಿದ್ದು, ಇವುಗಳ ಉದ್ದ 8223 ಕಿ.ಮೀ. ಇರುತ್ತದೆ. ಅದರಲ್ಲಿ 3978 ಕಿ.ಮೀ. ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಲಯದ ವತಿಯಿಂದ ನಿರ್ವಹಿಸಲಾಗುತ್ತಿದೆ. 4245 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಗಳನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದಿಂದ ನಿರ್ವಹಿಸಲಾಗುತ್ತಿದೆ.<br><br>ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ ಕಾಮಗಾರಿಯನ್ನು Short term maintenance contract (STMC) and Performance based maintenance contract (PBMC) ನಿರ್ವಹಣೆ ಅಡಿಯಲ್ಲಿ ಮಾಡಲಾಗುತ್ತಿದ್ದು, ಅನುದಾನವನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯ ನವದೆಹಲಿಯಿಂದ, ಒದಗಿಸಲಾಗುತ್ತಿದೆ.<br><br>ಲೋಕೋಪಯೋಗಿ ಇಲಾಖೆ ನಿರ್ವಹಿಸುತ್ತಿರುವ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳು ಈ ಕೆಳಕಂಡಂತಿವೆ. |

| ರಸ್ತೆಯ ವರ್ಗ | ರಸ್ತೆಗಳ ಒಟ್ಟು ಸಂಖ್ಯೆ | ರಸ್ತೆಯ ಒಟ್ಟು ಉದ್ದ (ಕಿ.ಮೀ) |
|---|---|---|
| ರಾಜ್ಯ ಹೆದ್ದಾರಿಗಳು | 1033 | 27815.38 |
| ಜಿಲ್ಲಾ ಮುಖ್ಯ ರಸ್ತೆಗಳು | 6123 | 55068.96 |

ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚುವುದು, ಬದಿಗಳಲ್ಲಿ ಜಂಗಲ್ ಕತ್ತರಿಸುವುದು, ಮಳೆನೀರು ಸರಾಗವಾಗಿ ಹರಿದು ಹೋಗಲು ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸುವುದು, ಎತ್ತರದ ಬರ್ಮ್‌ಗಳನ್ನು ತೆಗೆಯುವುದು, ಅವಶ್ಯಕವಿರುವಲ್ಲಿ ಬದಿಗಳಿಗೆ ಗ್ರಾವೆಲ್ ಶೋಲ್ಡರ್ ಒದಗಿಸುವುದು. ಇತ್ಯಾದಿ ನಿರ್ವಹಣಾ ಅಂಶಗಳನ್ನು ಕೈಗೊಳ್ಳಲಾಗುತ್ತದೆ.

ರಾಜ್ಯ ಹೆದ್ದಾರಿ, ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಿಗೆ ವಾರ್ಷಿಕವಾಗಿ ವೆಚ್ಚ ಮಾಡುತ್ತಿರುವ ಮೊತ್ತದ ವಿವರಗಳು:

| ರಸ್ತೆಯ ವರ್ಗ | ವೆಚ್ಚದ ವಿವರ (ರೂ.ಕೋಟಿಗಳಲ್ಲಿ) |
|---|---|
| ರಾಜ್ಯ ಹೆದ್ದಾರಿಗಳು | **275.29** |
| ಜಿಲ್ಲಾ ಮುಖ್ಯ ರಸ್ತೆಗಳು | **350.48** |
| ಒಟ್ಟು: | **625.77** |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಪಿ.ಎಂ.ಜಿ.ಎಸ್.ವೈ. ಹಾಗೂ ನಮ್ಮ ಗ್ರಾಮ, ನಮ್ಮ ರಸ್ತೆ ಯೋಜನೆಯನ್ನು ನಿರ್ವಹಿಸಲಾಗಿರುತ್ತದೆ. ವಿವರಗಳು ಕೆಳಕಂಡಂತಿರುತ್ತವೆ:
<table>
<tr><th>ಕ್ರ ಸಂ.</th><th>ಯೋಜನೆ</th><th>ರಸ್ತೆಗಳ ಸಂಖ್ಯೆ</th><th>ಉದ್ದ (ಕಿ.ಮೀ.ಗಳಲ್ಲಿ)</th></tr>
<tr><td>1</td><td>ಪಿ.ಎಂ.ಜಿ.ಎಸ್.ವೈ.–1</td><td>3277</td><td>16357.16</td></tr>
<tr><td>2</td><td>ಪಿ.ಎಂ.ಜಿ.ಎಸ್.ವೈ.–2</td><td>314</td><td>2218.16</td></tr>
<tr><td>3</td><td>ಪಿ.ಎಂ.ಜಿ.ಎಸ್.ವೈ.–3</td><td>900</td><td>5397.58</td></tr>
<tr><td>4</td><td>ನಮ್ಮ ಗ್ರಾಮ, ನಮ್ಮ ರಸ್ತೆ</td><td>6837</td><td>1788.79</td></tr>
</table>
ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಮತ್ತು ನಮ್ಮ ಗ್ರಾಮ, ನಮ್ಮ ರಸ್ತೆ ಯೋಜನೆಗಳಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ 5 ವರ್ಷಗಳ ವಾರ್ಷಿಕ ನಿರ್ವಹಣೆ ಹಾಗೂ 6ನೇ ವರ್ಷದ ಮರು ಡಾಂಬರೀಕರಣ ಕಾಮಗಾರಿಯನ್ನು ಮೂಲ ಗುತ್ತಿಗೆದಾರರಿಂದಲೇ ನಿರ್ವಹಿಸಲಾಗುತ್ತಿದ್ದು, ತದನಂತರ ರಸ್ತೆಗಳನ್ನು ಮಾತೃ ಇಲಾಖೆಯಾದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.
ಮುಂದುವರೆದು, ಪಿ.ಎಂ.ಜಿ.ಎಸ್.ವೈ. ಹಾಗೂ ನಮ್ಮ ಗ್ರಾಮ, ನಮ್ಮ ರಸ್ತೆ ಯೋಜನೆಯಡಿ ನಿರ್ಮಿಸಲಾದ ರಸ್ತೆಗಳಿಗೆ ವಾರ್ಷಿಕ ನಿರ್ವಹಣೆಯ ವರ್ಷವಾರು ವೆಚ್ಚದ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ ಸಂ.</th><th>ಯೋಜನೆ</th><th>ವರ್ಷ</th><th>ವೆಚ್ಚ</th></tr>
<tr><td>1</td><td>ಪಿ.ಎಂ.ಜಿ.ಎಸ್.ವೈ. ನಿರ್ವಹಣೆ</td><td>2022–23</td><td>40.29</td></tr>
<tr><td>2</td><td></td><td>2023–24</td><td>33.47</td></tr>
<tr><td>3</td><td></td><td>2024–25</td><td>35.13</td></tr>
<tr><td></td><td></td><td>ಒಟ್ಟು:</td><td>108.89</td></tr>
<tr><td>1</td><td>ಎನ್‌ಜಿಎನ್‌ಆರ್‌ವೈ ನಿರ್ವಹಣೆ</td><td>2022–23</td><td>120.73</td></tr>
<tr><td>2</td><td></td><td>2023–24</td><td>104.26</td></tr>
<tr><td>3</td><td></td><td>2024–25</td><td>100.00</td></tr>
<tr><td></td><td></td><td>ಒಟ್ಟು:</td><td>324.99</td></tr>
</table>
</td></tr>
<tr><td>ಆ)</td><td>ಲೋಕೋಪಯೋಗಿ ಇಲಾಖೆ ನಿರ್ಮಿಸಿರುವ ರಸ್ತೆಗಳ ಬದಿಗಳ ಹಳೆಯ ಅಪಾಯಕಾರಿ ಕಟ್ಟಡ, ಮರ, ಬದಿಯ ಹುಲ್ಲು ಇತ್ಯಾದಿಗಳನ್ನು ನಿಗದಿತವಾಗಿ ತೆರವುಗೊಳಿಸಲು ಪ್ರತ್ಯೇಕ ಅನುದಾನ ನೀಡಲಾಗುತ್ತಿದೆಯೇ; ಪ್ರತ್ಯೇಕ ಅನುದಾನ ಕೊರತೆಯ ಹಿನ್ನಲೆಯಲ್ಲಿ ಸದರಿ ರಸ್ತೆಗಳ ನಿರ್ವಹಣೆ ಮಾಡಲು</td><td>ಲೋಕೋಪಯೋಗಿ ಇಲಾಖೆ ರಸ್ತೆಗಳ ROW ನಲ್ಲಿ ಬರುವ Jungle clearance, Pruning of Trees, Shoulder Repairs, Drain cleaning, Road furnitures, Carraigeway Pothole filling ಹಾಗೂ ಇನ್ನಿತರೆ ದುರಸ್ಥಿ ಕಾಮಗಾರಿಗಳನ್ನು ಪ್ರತಿ ಸಾಲಿನಲ್ಲಿಯೂ ರಸ್ತೆಗಳ ನಿರ್ವಹಣೆಗಾಗಿ ನೀಡುವ ವಾರ್ಷಿಕ ನಿರ್ವಹಣಾ ಅನುದಾನದಲ್ಲಿ ಸೇರ್ಪಡೆ ಮಾಡಿಕೊಂಡು ರಸ್ತೆ ನಿರ್ವಹಣಾ ಕಾಮಗಾರಿಗಳನ್ನು ಕೈಗೊಂಡು ಸುಗಮ ವಾಹನ ಸಂಚಾರಕ್ಕೆ ರಸ್ತೆಗಳನ್ನು ಅನುವು ಮಾಡಿಕೊಡಲಾಗುತ್ತಿದೆ,</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | ತೊಂದರೆಯಾಗುತ್ತಿರುವುದನ್ನು ಪರಿಹರಿಸಲು ಸರಕಾರ ಯಾವ ಕ್ರಮವಹಿಸಿದೆ? | |
| ಇ) | ಲೋಕೋಪಯೋಗಿ ಇಲಾಖೆ ನಿರ್ವಹಿಸುತ್ತಿರುವ ರಸ್ತೆಗಳ ಬದಿಯಲ್ಲಿ ಹಲವಾರು ಕುಡಿಯುವ ನೀರಿನ ಪೈಪ್ ಲೈನ್, ವಿದ್ಯುತ್ ಕೇಬಲ್, ಟೆಲಿಫೋನ್ ಕೇಬಲ್, ಗ್ಯಾಸ್ ಪೈಪ್ ಲೈನ್ ಇತ್ಯಾದಿಗಳು ಹಾದು ಹೋಗುತ್ತಿದ್ದು ನಿರ್ಮಾಣ ಮತ್ತು ದುರಸ್ಥಿಗಾಗಿ ಪದೇ ಪದೇ ರಸ್ತೆಯನ್ನು ಅಗೆಯುವುದನ್ನು ನಿಯಂತ್ರಿಸಲು ಸರ್ಕಾರ ಯೋಜನೆ ರೂಪಿಸಿದೆಯೇ: | ರಾಷ್ಟ್ರೀಯ ಹೆದ್ದಾರಿಗಳಲ್ಲಿ Utility ಪೈಪ್‌ಗಳಾದ ಕುಡಿಯುವ ನೀರಿನ ಪೈಪ್ ಲೈನ್, ವಿದ್ಯುತ್ ಕೇಬಲ್, ಟೆಲಿಫೋನ್ ಕೇಬಲ್, ಗ್ಯಾಸ್ ಪೈಪ್‌ಲೈನ್ ಇತ್ಯಾದಿಗಳನ್ನು ಅಳವಡಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ MoRTH Circular No:RW/NH-33044/29/ 2015/S&R(R) Dated:22.11.2016 ರನ್ವಯ ವಿಸ್ತೃತ ಮಾನದಂಡಗಳನ್ನು ನಿಗಧಿಪಡಿಸಿದ್ದು, ಅದರ ಪ್ರಕಾರ ಇತರೆ ಪೈಪ್‌ಲೈನ್‌ಗಳನ್ನು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಳವಡಿಸಲು ಅನುಮತಿ ನೀಡಲಾಗುವುದು.<br><br>ಲೋಕೋಪಯೋಗಿ ಇಲಾಖೆ ವತಿಯ ರಸ್ತೆಗಳ ಬದಿಯಲ್ಲಿ ಪೈಪ್‌ಲೈನ್, ವಿದ್ಯುತ್ ಕೇಬಲ್, ಟೆಲಿಫೋನ್ ಕೇಬಲ್, ಗ್ಯಾಸ್ ಪೈಪ್‌ಲೈನ್ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಇಲಾಖೆಗೆ ಅನುಮತಿ ನೀಡುವ ಸಮಯದಲ್ಲಿ ರಸ್ತೆ ಅಗೆತವನ್ನು ಮೂಲಸ್ಥಿತಿಗೆ ತರಲು ಬೇಕಾಗುವ ಮೊತ್ತವನ್ನು ಲೆಕ್ಕಾಚಾರ ಮಾಡಿ, ಸದರಿ ಮೊತ್ತವನ್ನು ಆಯಾ ಇಲಾಖೆಯಿಂದ ಠೇವಣೀಕರಿಸಿಕೊಂಡು ಅನುಮತಿ ನೀಡಲಾಗುತ್ತಿದೆ. ಕಾಮಗಾರಿಯು ಪೂರ್ಣಗೊಂಡ ನಂತರ ಆಯಾ ಇಲಾಖೆಯ / ಸಂಸ್ಥೆಯ / ಲೋಕೋಪಯೋಗಿ ಇಲಾಖೆಯಿಂದ ಠೇವಣೀಕರಿಸಿಕೊಂಡ ಮೊತ್ತದಲ್ಲಿ ರಸ್ತೆಯನ್ನು ಮೂಲಸ್ಥಿತಿಗೆ ಅಭಿವೃದ್ಧಿಪಡಿಸಿ ಸಾರ್ವಜನಿಕರ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮವಹಿಸಲಾಗುತ್ತಿದೆ. |
| ಈ) | ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ರಸ್ತೆ ಬದಿಯಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರತ್ಯೇಕ ಡಕ್ಟ್ (Duct) ನಿರ್ಮಿಸಿ ಅವುಗಳಲ್ಲಿ ವಿವಿಧ ಕೇಬಲ್ ಹಾಗೂ ಪೈಪ್ ಲೈನ್ ಹಾಕಲು ಸೂಕ್ತ ವ್ಯವಸ್ಥೆ ಮಾಡುವ ಮೂಲಕ ಪದೇ ಪದೇ ರಸ್ತೆ ಅಗೆಯುವ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯೋಜಿಸಿದೆಯೇ? | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ಬಹುತೇಕ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ರಾಜ್ಯ ಹೆದ್ದಾರಿಗಳ ನಗರ ಪರಿಮಿತಿಯಲ್ಲಿ ನಿರ್ಮಿಸುವ ಹೊಸ ರಸ್ತೆ ಕಾಮಗಾರಿಗಳಲ್ಲಿ Electrical Cable, OFC Cable, Pipe line ಗಳನ್ನು ಅಳವಡಿಸಲು ಪ್ರತ್ಯೇಕ Utility Corridors ಗಳನ್ನು ನಿರ್ಮಿಸಲು ಅನುವು ಮಾಡಿಕೊಂಡು ಕಾಮಗಾರಿಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ. |

ಕಡತ ಸಂಖ್ಯೆ: ಲೋಇ 123 ಸಿಬಿಆರ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು